# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 123 (163)
**ಸದಸ್ಯರ ಹೆಸರು** : ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)
**ಉತ್ತರಿಸಬೇಕಾದ ದಿನಾಂಕ** : ದಿನಾಂಕ:01-02-2021
**ಉತ್ತರಿಸುವ ಸಚಿವರು** : ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ (1-5) ವೃಂದದಲ್ಲಿ ಸೇವೆ ಸಲ್ಲಿಸುತ್ತಿರುವ 80,000ಕ್ಕೂ ಅಧಿಕ ಪದವೀಧರ ಶಿಕ್ಷಕರಿಗೆ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (6 ರಿಂದ 8ನೇ ತರಗತಿ) ಆಗಿ ಪದೋನ್ನತಿ ನೀಡಲು ಸಿ & ಆರ್ ದಿನಾಂಕ;07-08-2017ನ್ನು ತಿದ್ದುಪಡಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 626 ಪಿಬಿಎಸ್ 2014 ದಿನಾಂಕ:07-08-2017ರ ಪ್ರಕಾರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿನ ಪದವೀಧರ (6 ರಿಂದ 8ನೇ ತರಗತಿಗಳ) ಹುದ್ದೆಗಳ ನೇಮಕಾತಿಯಲ್ಲಿ, ನಿಯಮಗಳಂತೆ 1 ರಿಂದ 5ನೇ ತರಗತಿಗಳ ವೃಂದದಿಂದ ಪದವೀಧರ ಪ್ರಾಥಮಿಕ ಶಿಕ್ಷಕರ 6 ರಿಂದ 8ನೇ ತರಗತಿಗಳು ವೃಂದಕ್ಕೆ ಸೇವಾ ನಿರತರ ಕೋಟಾದಡಿ ಪರೀಕ್ಷೆ ಮುಖಾಂತರ "ಸೇವಾ ನಿರತರ ನೇಮಕಾತಿಗೆ" ಅವಕಾಶ ಇರುತ್ತದೆ.<br><br>ಹಾಗೆಯೇ, ನೇರ ನೇಮಕಾತಿ ಹಾಗೂ ಸೇವಾ ನಿರತರಿಗೆ ಶೇ 75:25 ಪ್ರಮಾಣ ನಿಗದಿ ಇದೆ. ಮತ್ತು ಪರೀಕ್ಷೆ ಮುಖಾಂತರ ಮಾತ್ರ ಸೇವಾ ನಿರತರಿಗೆ ನೇಮಕಾತಿಗೆ ಅವಕಾಶವಿದೆ.<br><br>ಈ ವಿಷಯದಲ್ಲಿ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಿಂದ, ಮನವಿಗಳು ಸ್ವೀಕೃತವಾಗಿದ್ದು, ಅದರಂತೆ 1 ರಿಂದ 5ನೇ ತರಗತಿಗಳ ವೃಂದದಿಂದ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (6 ರಿಂದ 8ನೇ ತರಗತಿಗಳು) ವೃಂದಕ್ಕೆ ಪರೀಕ್ಷೆ ಹೊರತಾಗಿ ಸೇವಾ ಜೇಷ್ಠತೆಯನ್ನು ಆಧರಿಸಿ, ಶೇ.50 ರ ಪ್ರಮಾಣದಲ್ಲಿ ಅರ್ಹ ಪ್ರಾಥಮಿಕ ಪದವೀಧರ ಶಾಲಾ (1-5) ಶಿಕ್ಷಕರಿಗೆ ಬಡ್ತಿಗೆ ಅವಕಾಶ ಕಲ್ಪಿಸಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |

**ಸಂಖ್ಯೆ**: ಇಪಿ 1 ಪಿಎಂಎ 2020

**(ಎಸ್. ಸುರೇಶ್‌ಕುಮಾರ್)**
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ
ಹಾಗೂ ಸಕಾಲ ಸಚಿವರು